(ಐ) ರೋಣ ತಾಲ್ಲೂಕಿನಲ್ಲಿ ತೋಟಗಾರಿಕೆ ಕ್ಷೇತ್ರ ಮತ್ತು ತೋಟಗಾರಿಕೆಯ ಅಭಿವೃದ್ಧಿ

ಶ್ರೀ ಶೈಲಪ್ಪ ಬಿದರೂರ (ರೋಣ) : ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆ ರೋಣ ತಾಲ್ಲೂಕಿನ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಅನುಕೂಲಕರವಾದ ನೀರು, ಭೂಮಿ, ಹವಾಗುಣ ಇರುವುದರಿಂದ ರೈತರು ತೋಟಗಾರಿಕೆ ಬೆಳೆಗಳಲ್ಲಿ ತೊಡಗಿರುವರು ಅಲ್ಲಿನ ರೈತರಿಗೆ ಒಳ್ಳೆಯ ಸಸಿಗಳು ಮತ್ತು ಕಸಿ ಮಾಡಿದ ಸಸಿಗಳು (ಬಡೆಡ್ ಅಂಡ್ ಗ್ರಾಫ್ಟೆಡ್ ಪ್ಲಾಂಟ್ಸ) ಅನ್ನು ಸಕಾಲಕ್ಕೆ ಪೂರೈಸಲಿಕ್ಕೆ ತೋಟಗಾರಿಕೆ ಕ್ಷೇತ್ರಕ್ಕಾಗಿ ವಿತರಣೆ ಮಾಡಿದ 10 ಎಕರೆ ಭೂಮಿಯನ್ನು ತೋಟಗಾರಿಕೆ ಕ್ಷೇತ್ರವನ್ನು ಯಾವಾಗ ಅಭಿವೃದ್ಧಿಪಡಿಸುತ್ತೀರಿ?

ಶ್ರೀ ಸಿ. ಭೈರೇಗೌಡ (ಮಾನ್ಯ ಕೃಷಿ ಖಾತೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ತೋಟಗಾರಿಕೆ ರಾಜ್ಯ ಸಚಿವರ ಪರವಾಗಿ ಈ ಹೇಳಿಕೆಯನ್ನು ಕೊಡಬಯುಸುತ್ತೇನೆ.

ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಯ ಪ್ರಸಕ್ತ ಒಂದು ಸಸ್ಯಾಗಾರ ಮತ್ತು ತೋಟಗಾರಿಕೆ ಕ್ಷೇತ್ರವನ್ನು ಹೊಂದಿದೆ. ಸಸ್ಯಾಗಾರವು ರೋಣದಲ್ಲಿದ್ದು ಇದರ ಒಟ್ಟು ವಿಸ್ತಾರವು 0.12ಎಕರೆ. ಇಲ್ಲಿ ಒಂದು ತಾಲ್ಲೂಕು ಕಛೇರಿ ಹಾಗೂ ಒಂದು ಚಿಕ್ಕ ಸಸ್ಯಾಗಾರವಿದ್ದು, ಅಲ್ಲಿ ತೆಂಗು, ಸಪೋಟ, ಪೇರಲೆ ಗಿಡಗಳನ್ನು ಬೆಳೆಸಲಾಗಿದೆ. ಇದೇ ತಾಲ್ಲೂಕಿನ ರಾಜೂರು ಗ್ರಾಮದಲ್ಲಿ 1993-94ನೇ ಸಾಲಿನಲ್ಲಿ 10.26 ಎಕರೆ ಪ್ರದೇಶದಲ್ಲಿ ಒಂದು ತೋಟಗಾರಿಕೆ ಕ್ಷೇತ್ರವನ್ನು ಜಿಲ್ಲಾ ಪಂಚಾಯತ್ ವತಿಯಿಂದ ಅಭಿವೃದ್ಧಿಪಡಿಸಲಾಗುತ್ತಿದೆ. ಇಲ್ಲಿ ಈಗಾಗಲೇ ಒಂದು ಬೋರವೆಲ್ ನಿರ್ಮಿಸಲಾಗಿದೆ. ಉಳಿದ ಅಭಿವೃದ್ಧಿ ಕಾರ್ಯಗಳಾದ ಬೇಲಿ, ತಾಯಿ ಗಿಡಗಳನ್ನು ನೆಡುವಿಕೆ ಮತ್ತು ಸಸ್ಯಾಭಿವೃದ್ಧಿಯನ್ನು ಸಧ್ಯದಲ್ಲಿಯೇ ಕೈಗೊಳ್ಳಲಾಗುವುದು.

ರೋಣ ತಾಲ್ಲೂಕಿನಲ್ಲಿ ತೋಟಗಾರಿಕೆಯನ್ನು ಒಟ್ಟು 897ಹೆಕ್ಟೇರ್ ಪ್ರದೇಶದಲ್ಲಿ ಮಾಡಲಾಗುತ್ತಿದೆ. ಮುಖ್ಯ ಬೆಳೆಗಳೆಂದರೆ ಮಾವು, ಸೀಬೆ, ಸಪೋಟ, ನಿಂಬೆ, ದಾಳಿಂಬೆ, ತೆಂಗು, ಈರುಳ್ಳಿ, ವೀಳ್ಯದೆಲೆ, ಇತ್ಯಾದಿಗಳು.

1995-96ನೇ ಸಾಲಿನಲ್ಲಿ ಈ ತಾಲ್ಲೂಕಿನಲ್ಲಿ ಹೊಂಬಳ್ಳಿ ಯೋಜನೆಯಡಿಯಲ್ಲಿ 270 ಹೆಕ್ಟೇರ್ ಪ್ರದೇಶದಲ್ಲಿ ಸಪೋಟ, ಮಾವು, ಬೋರೆ, ನಿಂಬೆ, ಬೆಳೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

ವಿಶೇಷ ಘಟಕ ಮತ್ತು ಗಿರಿಜನ ಅಭಿವೃದ್ಧಿ ಯೋಜನೆಯಡಿಯಲ್ಲಿ ಒಟ್ಟು 350 ಘಟಕ ತೋಟಗಳನ್ನು ನಿರ್ಮಿಸಲಾಗಿದೆ.

ಹನಿ ನೀರಾವರಿ ಯೋಜನೆಯಡಿಯಲ್ಲಿ 1.4 ಲಕ್ಷ ರೂ.ಗಳನ್ನು ಸಬ್ಸಿಡಿಯಾಗಿ ವಿತರಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಅಂದರೆ, ಈಗಿರುವ ಪ್ರದೇಶವನ್ನು ಮುಂದಿನ ಐದು ವರ್ಷಗಳಲ್ಲಿ ದುಪ್ಪಟ್ಟುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.